1	2	3
03	ಬೆಳಗಾಂ	2879
04	ಬಳ್ಳಾರಿ	67
05	ಬೀದರ್	242
06	ಬಾಗಲಕೋಟೆ	184
07	ಬಿಜಾಪುರ	81
08	ಚಾಮರಾಜನಗರ	86
09	ಚಿತ್ರದುರ್ಗ	412
10	ಚಿಕ್ಕಮಗಳೂರು	138
11	ಕೊಡಗು	35
12	ದಾವಣಗೆರೆ	712
13	ಧಾರವಾಡ	445
14	ಹುಬ್ಬಳ್ಳಿ	225
15	ಗುಲ್ಬರ್ಗಾ	584
16	ಗದಗ್	178
17	ಹಾಸನ	267
18	ಹಾವೇರಿ	350
19	ಕೋಲಾರ	312
20	ಕೊಪ್ಪಳ	261
21	ಮಂಡ್ಯ	206
22	ಮೈಸೂರು	497
23	ಕಾರವಾರ	123
24	ರಾಯಚೂರು	69
25	ಶಿವಮೊಗ್ಗ	524
26	ಮಂಗಳೂರು	81
27	ತುಮಕೂರು	861
28	ಉಡುಪಿ	46
29	ಪಿಂಚಣಿ ಬಡವಾಡೆ ಖಜಾನೆ	1301
	ಒಟ್ಟು	**11411**

761 (886) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಈ ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಈ ದುರಸ್ತಿಗೆ ಕಾಲಮಿತಿಯನ್ನೇನಾದರೂ ಹಾಕಿಕೊಳ್ಳಲಾಗಿದೆಯೇ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಸರ್ಕಾರದ ನೂತನ ಕೈಗಾರಿಕಾ ನೀತಿ 2006–2011ರನ್ವಯ ಅಂತರಸನಹಳ್ಳಿ ಮೊದಲನೇ ಮತ್ತು ಎರಡನೇ ಹಂತಗಳಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಅದರ ವಿವರ ಈ ಕೆಳಕಂಡಂತಿದೆ

ಕ್ರ ಸಂ	ಕೈಗಾರಿಕಾ ಪ್ರದೇಶದ ಹೆಸರು	ಕೈಗೊಂಡ ಕ್ರಮ
1	ಅಂತರಸನಹಳ್ಳಿ ಮೊದಲನೇ ಹಂತ	ಈ ಕೈಗಾರಿಕಾ ಪ್ರದೇಶದಲ್ಲಿ ರೂ 134 00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಟೆಂಡರ್‌ಗಳನ್ನು ಕರೆಯಲಾಗಿದ್ದು, ಈ ಟೆಂಡರ್‌ಗಳ ಅನುಮೋದನೆಯು ಅಂತಿಮ ಹಂತದಲ್ಲಿರುತ್ತದೆ ಈ ಕಾಮಗಾರಿಯು 2007ರ ಮೇ ತಿಂಗಳ ಒಳಗೆ ಮುಗಿಯುವ ನಿರೀಕ್ಷೆಯಿದೆ
2	ಅಂತರಸನಹಳ್ಳಿ 2ನೇ ಹಂತ	ಈ ಕೈಗಾರಿಕಾ ಪ್ರದೇಶದಲ್ಲಿ ರೂ 265 00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಟೆಂಡರ್‌ಗಳನ್ನು ಕರೆಯಲಾಗಿದೆ ಈ ಕಾಮಗಾರಿಯು 2007ರ ಮೇ ತಿಂಗಳ ಒಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ

763 (1150) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಮ) ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಷ್ಣಸ್ಥಾವರಗಳು ಉಗುಳುವ ಹೊಗೆ ಮಿಶ್ರಿತ ಧೂಳಿನಿಂದ ಪರಿಸರದ ಮೇಲೆ ಆಮ್ಲ ಮಳೆಯಿಂದಾಗುವ ದುಷ್ಪರಿಣಾಮಗಳಿರುವ ಪರಿಹಾರ ಮಾರ್ಗ ಯಾವುದು ,